ಮೂ. ದಾ. ನಂ. 109/2015

ಡಿ.ಡಬ್ಲ್ಯು2

(ಇಂದು ದಿನಾಂಕ 02-12-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ವಾದಿ ಪರ ಶ್ರೀ. ಎನ್.ಎಮ್.ಎನ್. ವಕೀಲರಿಂದಃ**

ನಾನು ನ್ಯಾಯಾಲಯದ ಆವರಣದ ವ್ಯಾಪ್ತಿಯಲ್ಲಿ ಪ್ರಮಾಣ ಪತ್ರಗಳನ್ನು ಹಾಗೂ ಇತರ ದಾಖಲಾತಿಗಳನ್ನು ಬರೆದುಕೊಡುವ ಕೆಲಸ ಮಾಡುತ್ತೇನೆ ಎಂದರೆ ಸರಿ. ನಾನು ಅಧಿಕೃತ ದಸ್ತಾವೇಜು ಬರಹಗಾರ ಇರುವುದಿಲ್ಲ. ನಾನು ಪ್ರಮಾಣ ಪತ್ರ ಹಾಗೂ ಅದೇ ರೀತಿಯಾದಂತಹ ದಾಖಲಾತಿಗಳನ್ನು ಬರೆದುಕೊಡುವ ಕೆಲಸಗಳನ್ನು ಸುಮಾರು 30 ವರ್ಷಗಳಿಂದ ಮಾಡುತ್ತಿದ್ದೇನೆ. ಕುಮಟಾದಲ್ಲಿ ವಕೀಲ ವೃತ್ತಿ ಮಾಡುತ್ತಿದ್ದ ಕೆ.ಎನ್.ನಾಯ್ಕ ಎಂಬುವವರ ಬಳಿ ನಾನು ಕಾರಕೂನನಾಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ನಾನು ಸದ್ರಿ ವಕೀಲರ ಬಳಿ 1985 ರಿಂದ 1998 ರವರೆಗೆ ಕೆಲಸ ಮಾಡಿರುತ್ತೇನೆ. ಆಗಿನ ಅವಧಿಯಲ್ಲಿ ಕೆ.ಎನ್.ನಾಯ್ಕ ರವರು ಖ್ಯಾತ ವಕೀಲರು ಆಗಿದ್ದರು ಎಂದರೆ ಸರಿ. ಕೆ.ಎನ್.ನಾಯ್ಕ ವಕೀಲರು ನನಗೆ ಪ್ರತಿ ತಿಂಗಳು ಹಣವನ್ನು ನೀಡುತ್ತಿದ್ದರು. ಕೆ.ಎನ್.ನಾಯ್ಕರವರು ನ್ಯಾಯಾಲಯಕ್ಕೆ ಬಂದ ಸಂದರ್ಭದಲ್ಲಿ ನಾನೂ ಸಹ ಅವರೊಂದಿಗೆ ನ್ಯಾಯಾಲಯಕ್ಕೆ ಬರುತ್ತಿದ್ದು ಅವರೊಂದಿಗೆ ಇರುತ್ತಿದ್ದೇನು.

ಅನಂತ ಗಣಪಯ್ಯ ಹರಿಕಂತ್ರ ಅವರ ಪರಿಚಯ ನನಗೆ 1996-97 ರಲ್ಲಿ ಆಗಿರುತ್ತದೆ. ನಾನು ನ್ಯಾಯಾಲಯಕ್ಕೆ ಬರುತ್ತಿದ್ದ ಸಂದರ್ಭದಲ್ಲಿ ಅವರೂ ಸಹ ನ್ಯಾಯಾಲಯಕ್ಕೆ ಬರುತ್ತಿದ್ದು, ಆ ಮೂಲಕ ಅವರ ಪರಿಚಯ ಆಗಿರುತ್ತದೆ. ಅವರು ನ್ಯಾಯಾಲಯಕ್ಕೆ ಏಕೆ ಬರುತ್ತಿದ್ದರು ಎಂದು ನನಗೆ ಗೊತ್ತಿಲ್ಲ.

ನಾನು ನ್ಯಾಯಾಲಯಕ್ಕೆ ವಕೀಲರೊಂದಿಗೆ ಬರುತ್ತಿದ್ದ ಸಂದರ್ಭದಲ್ಲಿ ನರಸಿಂಹ ವೆಂಕಟಾ ಗೌಡಾ ಎಂಬುವವರು ಈಗಿನ ಹೆಚ್ಚುವರಿ ಸಿವಿಲ್ ನ್ಯಾಯಾಲಯದ ಆವರಣದ ಬಳಿ ದಸ್ತಾವೇಜುಗಳ ಬರವಣಿಗೆ ಮಾಡುತ್ತಿದ್ದರು ಎಂದರೆ ಸರಿ. ನನಗೆ ವಿಲ್‌ನಾಮೆ ಹಾಗೂ ಇತರ ದಾಖಲಾತಿಗಳನ್ನು ಹೇಗೆ ಬರೆಯುತ್ತಾರೆ ಎಂಬ ಬಗ್ಗೆ ತಿಳುವಳಿಕೆ ಇತ್ತು ಎಂದರೆ ಸ್ವಲ್ಪ ಮಟ್ಟಿಗೆ ಇತ್ತು ಎಂದು ನುಡಿಯುತ್ತಾರೆ.

ಅನಂತ ಗಣಪಯ್ಯ ಹರಿಕಂತ್ರ ರವರು ನನ್ನ ಸಹಿಯನ್ನು ವಿಲ್‌ನಾಮೆಗೆ ಪಡೆಯುವ ಪೂರ್ವದಲ್ಲಿ ನನ್ನಿಂದ ಯಾವುದೇ ದಾಖಲಾತಿಗಳ ಬರವಣಿಗೆ ಮಾಡಿಸಿಕೊಂಡಿದ್ದು ಇರುವುದಿಲ್ಲ. ವಿಲ್‌ನಾಮೆಗೆ ಸಹಿ ಮಾಡುವಂತೆ ವಿಲ್‌ನಾಮೆ ಬರೆದ ನರಸಿಂಹ ಗೌಡರು ನನಗೆ ತಿಳಿಸಿರುತ್ತಾರೆ. ನನಗೆ ಸಹಿ ಮಾಡುವಂತೆ ವಿಲ್‌ನಾಮೆ ಬರೆದ ದಿನದಂದೆ ತಿಳಿಸಿರುತ್ತಾರೆ. ನನಗೆ ಸಹಿ ಮಾಡಬೇಕೆಂಬ ವಿಚಾರವನ್ನು ಉಪ-ನೋಂದಣಾಧಿಕಾರಿಗಳವರ ಕಛೇರಿಯಲ್ಲಿ ತಿಳಿಸಿರುತ್ತಾರೆ. ನಾನು ಸಹಿ ಮಾಡಿದಾಗ ಸಮಯ ಸುಮಾರು ಮಧ್ಯಾಹ್ನ 01-00 ರಿಂದ 01-10 ಗಂಟೆ ಆಗಿರಬಹುದು. ವಿಲ್‌ನಾಮೆಗೆ ಸಹಿ ಮಾಡುವ ಪೂರ್ವದಲ್ಲಿ ಸ್ಥಳಕ್ಕೆ ಸಂಭಂಧಿಸಿದ ಆರ್.ಟಿ.ಸಿ. ಹಾಗೂ ಇತರ ದಾಖಲಾತಿಗಳನ್ನು ನನಗೆ ನರಸಿಂಹ ಗೌಡರು ತೋರಿಸಿರುತ್ತಾರೆ.

ನರಸಿಂಹ ಗೌಡರು ಸ್ವತ್ತಿನ ಆರ್.ಟಿ.ಸಿ ಯನ್ನು ನನಗೆ ತೋರಿಸಿರುತ್ತಾರೆ. ನಾನು ಸಹಿ ಮಾಡಿದ ಸಂದರ್ಭದಲ್ಲಿ ನ್ಯಾಯಾಲಯ ತೆರೆದಿತ್ತು. ನಾನು ಉಪ-ನೋಂದಣಾಧಿಕಾರಿಯವರ ಕಛೇರಿಗೆ ನರಸಿಂಹ ಭಟ್ಟ ರವರು ಬರಲು ಹೇಳಿದ ಮೇರೆಗೆ ಹೋಗಿರುತ್ತೇನೆ. ಆ ಸಂದರ್ಭದಲ್ಲಿ ಉಪ-ನೋಂದಣಾಧಿಕಾರಿಯವರ ಕಛೇರಿ ತಾಲೂಕು ಕಛೇರಿಯ ಪಕ್ಕದಲ್ಲಿ ಇತ್ತು. ನಾನು ಉಪ-ನೋಂದಣಾಧಿಕಾರಿಯವರ ಕಛೇರಿಗೆ ಹೋದಾಗ ವಿಲ್‌ನಾಮೆಗೆ ಸಂಬಂಧಪಟ್ಟಂತೆ ರವಿ ಗಿರೀಶ ಗಿರಿಯನ್ ಇದ್ದು, ಇತರ ಯಾರು ಇದ್ದರು ಎಂದು ಹೇಳಲು ನೆನಪಾಗುತ್ತಿಲ್ಲ.

ನಾನು ಉಪ-ನೋಂದಣಾಧಿಕಾರಿಯವರ ಕಛೇರಿಗೆ ಹೋದಾಗ ವಿಲ್‌ನಾಮೆಯ ಬರವಣಿಗೆ ಮುಗಿದಿತ್ತು. ವಿಲ್‌ನಾಮೆಗೆ ನನ್ನ ಒಂದು ಸಹಿಯನ್ನು ತೆಗೆದುಕೊಂಡಿರುತ್ತಾರೆ. ವಿಲ್‌ನಾಮೆಗೆ ನರಸಿಂಹ ವೆಂಕಟಾ ಗೌಡಾ ಎಂಬುವವರು ಮೊದಲು ಅನಂತ ಗಣಪಯ್ಯ ಹರಿಕಂತ್ರ ರವರು ಸಹಿ ಮಾಡಿದ್ದು ನಂತರದಲ್ಲಿ ರವಿ ರವರು ಸಹಿ ಮಾಡಿದ್ದು, ಆ ನಂತರ ನಾನು ಸಹಿ ಮಾಡಿರುತ್ತೇನೆ. ಉಪ-ನೋಂದಣಾಧಿಕಾರಿಯವರ ಕಛೇರಿಯಲ್ಲಿ ನಾನು ಸುಮಾರು ಅರ್ಧ ಗಂಟೆಯ ಅವಧಿಯವರೆಗೆ ಇದ್ದೇನು.ಉಪ-ನೋಂದಣಾಧಿಕಾರಿಯವರ ಕಛೇರಿಗೆ ಹೋದ ಸುಮಾರು 10 ರಿಂದ 15 ನಿಮಿಷಗಳಲ್ಲಿ

ವಿಲ್‌ನಾಮೆಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನಾನು ಹೋದ ನಂತರ ಹಾಗೂ ಸಹಿ ಮಾಡುವ ನಡುವಿನ ಅವಧಿಯಲ್ಲಿ ಏನು ಮಾಡುತ್ತಿದ್ದೆ ಎಂದು ಹೇಳಲು ನೆನಪಾಗುತ್ತಿಲ್ಲ.

ನಾನು ವಿಲ್‌ನಾಮೆಗೆ ಸಹಿ ಮಾಡಿದ ಸಂದರ್ಭದಲ್ಲಿ ಉಪ-ನೋಂದಣಾಧಿಕಾರಿಯವರ ಕಛೇರಿ ಈಗಿನ ತಹಶೀಲದಾರ ರವರ ಕಛೇರಿ ಇರುವ ಆವರಣದ ಎಡಭಾಗದ ಒಂದು ಪಾರ್ಶ್ವದಲ್ಲಿ ಇತ್ತು. ನೋಂದಣಿಗೆ ಬಂದ ವ್ಯಕ್ತಿಗಳು ಕಛೇರಿಯ ಹೊರಭಾಗದಲ್ಲಿ ನಿಲ್ಲಬೇಕಾಗುತ್ತದೆ ಎಂದರೆ ಸರಿ. ನಾನು ಉಪ-ನೋಂದಣಾಧಿಕಾರಿಗಳ ಕಛೇರಿಯ ಬಳಿ ಸಹಿ ಮಾಡುವ ಪೂರ್ವದಲ್ಲಿ ಕಾಯುತ್ತಿದ್ದಾಗ ರವಿ ಗಿರಿಯನ್‌ನವರು ನನ್ನ ಪಕ್ಕದಲ್ಲಿಯೇ ಇದ್ದರು. ನನಗೆ ರವಿ ಗಿರಿಯನ್‌ರವರ ಪರಿಚಯು ವಿಲ್‌ನಾಮಗೆ ಸಹಿ ಮಾಡುವ ದಿನದ ಪೂರ್ವದಿಂದಲೂ ಇತ್ತು. ನಮ್ಮ ಜೊತೆಗೆ ಅನಂತ ಗಣಪಯ್ಯ ಹರಿಕಂತ್ರ ರವರೂ ಸಹ ನಿಂತುಕೊಂಡಿದ್ದರು. ನಾನು, ರವಿ ಗಿರಿಯನ್ ಮತ್ತು ಅನಂತ ಗಣಪಯ್ಯ ಹರಿಕಂತ್ರರವರು ವಿಲ್‌ನಾಮೆಗೆ ಸಹಿ ಮಾಡುವ ಪೂರ್ವದಲ್ಲಿ ಒಟ್ಟಿಗೆ ನಿಂತಿದ್ದೇವು.

ನಾನು ಉಪ-ನೋಂದಣಾಧಿಕಾರಿ ಕಛೇರಿಯ ಒಳಭಾಗದಲ್ಲಿ ವಿಲ್‌ನಾಮೆಗೆ ಸಹಿ ಮಾಡಿರುತ್ತೇನೆ. ನನ್ನ ಸಹಿಯನ್ನು ಉಪ-ನೋಂದಣಾಧಿಕಾರಿಯವರು ಪಡೆದುಕೊಂಡಿರುತ್ತಾರೆ. ಅನಂತ ಗಣಪಯ್ಯ ಹರಿಕಂತ್ರ ರವರು ವಿಲ್‌ನಾಮೆಗೆ ಸುಮಾರು 4 ರಿಂದ 5 ಸಹಿಗಳನ್ನು ಮಾಡಿರುತ್ತಾರೆ. ಸಾಮಾನ್ಯವಾಗಿ ಒಂದು ದಾಖಲೆಗೆ ಸಹಿ ಹಾಕಿದ ನಂತರ ಕೆಳಭಾಗದಲ್ಲಿ ಗುರುತಿಸುವಿಕೆಯ ಸಲುವಾಗಿ ಅವರ ಹೆಸರು ಹಾಗೂ ವಿಳಾಸವನ್ನು ಬರೆಯಲಾಗುತ್ತದೆ ಎಂದರೆ ಇರಬಹುದು. ವಿಲ್‌ನಾಮೆಯಲ್ಲಿ ನಾನು ಸಹಿ ಮಾಡಿದ್ದು, ವಿಳಾಸವನ್ನು ನಮೂದಿಸಿರುವುದಿಲ್ಲ. ನಾನು ಹೇಳುವಂತೆ ಯಾವುದೇ ವಿಲ್‌ನಾಮೆ ಅನಂತ ಗಣಪಯ್ಯ ಹರಿಕಂತ್ರ ರವರು ಪ್ರತಿವಾದಿಯ ಪರ ಬರೆದು, ನೋಂದಣಿ ಮಾಡಿಸಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ವಿಲ್‌ನಾಮೆಗೆ ರವಿ ಗಿರಿಯನ್‌ನವರು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅನಂತ ಗಣಪಯ್ಯ ಹರಿಕಂತ್ರ ರವರು ವಿಲ್‌ನಾಮೆಗೆ 4-5 ಸಹಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ರವಿ ಗಿರಿಯನ್ ಮತ್ತು ಅನಂತ ಹರಿಕಂತ್ರ

ರವರು ಉಪ ನೋಂದಣಾಧಿಕಾರಿಗಳ ಕಛೇರಿಯ ಬಳಿ ನಿಂತಿದ್ದಾಗ ನರಸಿಂಹ ಗೌಡ ರವರು ಸಹ ಉಪ-ನೋಂದಣಾಧಿಕಾರಿಯವರ ಕಛೇರಿಯ ಕಾರಿಡಾರ್ ನ ಬಳಿ ನಿಂತಿದ್ದರು. ಉಪ -ನೋಂದಣಾಧಿಕಾರಿಯವರ ಕಛೇರಿಯಲ್ಲಿ ಮತ್ತೊಂದು ನೋಂದಣಿ ಪ್ರಕ್ರಿಯೆ ನಡೆಯುತ್ತಿದ್ದ ಕಾರಣ ನಾವು 10-15 ನಿಮಿಷ ಹೊರಗೆ ನಿಂತಿರುತ್ತೇವೆ. ನಾವು ನಿಂತಿದ್ದ ಸಂದರ್ಭದಲ್ಲಿ ಉಪ-ನೋಂದಣಾಧಿಕಾರಿಗಳ ಕಛೇರಿಯ ಬಳಿ ಇತರ ಜನರು ಇದ್ದರು. ವಿಲ್‌ನಾಮೆಯನ್ನು ನೋಂದಣಿ ಮಾಡಲಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅನಂತ ಗಣಪಯ್ಯ ಹರಿಕಂತ್ರ ರವರು ಪ್ರತಿವಾದಿಯ ಹೆಸರಿಗೆ ಯಾವುದೇ ವಿಲ್‌ನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಹಾಜರುಪಡಿಸಿರುವ ನಿಡಿ 7 ರ ವಿಲ್‌ನಾಮೆಯು ಸೃಷ್ಟಿಸಲಾಗಿದ್ದು, ಭೋಗಸ್ ಆಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯ ಪ್ರಭಾವಕ್ಕೆ ಒಳಗಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ